ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ಕಾರಿಯವರ ನ್ಯಾಯಾಲಯ, ಕೊಡಗು, ಮಡಿಕೇರಿ

ಸಿ.ಸಿ.ನಂಃ **1092/16**

ಪಿಡಬ್ಲ್ಯುಃ **-6**
ಸಿಡಬ್ಯುಃ **-4**

ದಿನಾಂಕಃ **13.09.2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | - ಹರೀಶ |
| ತಂದೆಯ ಹೆಸರು | - ಸಿದ್ಧಪ್ಪ |
| ವಯಸ್ಸು | - 34 ವರ್ಷ |
| ವೃತ್ತಿ | - ಅಸಿಸ್ಟೆಂಟ್ ಮ್ಯಾನೇಜರ್, ಮಣಪುರಂ ಫೈನಾನ್ಸ್ , ಹೆಚ್ ಇ ಎಲ್, ಬೆಂಗಳೂರು |
| ವಾಸಸ್ಥಳ | - ಬನಶಂಕರಿ, ಬೆಂಗಳೂರು |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ-

ಚಾಸಾ-5 ಮತ್ತು 8 ಗೊತ್ತು. 1 ನೇ ಆರೋಪಿಯನ್ನು ನೋಡಿದ್ದೇನೆ. ದಿಃ 06.05.2016 ರಂದು ನಾಪೋಕ್ಲು ಪೊಲೀಸರು 1 ನೇ ಆರೋಪಿಯನ್ನು ಕರೆದುಕೊಂಡು ಬೆಂಗಳೂರಿನಲ್ಲಿರುವ ಮಣಪುರಂ ಫೈನಾನ್ಸ್ ಕಚೇರಿಗೆ ಬಂದಿದ್ದರು. 1 ನೇ ಆರೋಪಿ ಚಿನ್ನಾಭಾರಣವನ್ನು ಕಳ್ಳತನ ಮಾಡಿ ರಮೇಶ್ ಎನ್ನುವವರ ಹೆಸರಿನಲ್ಲಿ ನಮ್ಮ ಫೈನಾನ್ಸ್ ನಲ್ಲಿ ಅಡಯಿಟ್ಟು ರೂ.74,500/- ಹಣವನ್ನು ಪಡೆದಿದ್ದರು. 1 ನೇ ಆರೋಪಿ 5 ಉಂಗುರಗಳು, ಒಂದು ನೆಕ್ಲೇಸನ್ನು ಮತ್ತು ನೆಕ್ಲೇಸ್‌ನಂತಿರುವ ಬ್ರಾಸ್ ಲೈಟನ್ನು ಅಡವಿಟ್ಟಿರುತ್ತಾರೆ. ಪೊಲೀಸರು ಸದರಿ ಅಡಯಿಟ್ಟ ಒಡವೆಯನ್ನು ಮದ್ಯಾಹ್ನ 1.00 ಗಂಟೆಯಿಂದ 3.00 ಗಂಟೆಯವರೆಗೆ ನಿಪಿ-5 ಅಮಾನತು ಮಹಜರು ಬರೆದು ವಶಕ್ಕೆ ಪಡೆದಿರುತ್ತಾರೆ. ಸಾಕ್ಷಿ ನಿಪಿ-5 ರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಚಾಸಾ-5 ಮತ್ತು 8 ರವರು ಸಹ ಸಹಿ ಮಾಡಿರುತ್ತಾರೆ. ಸಾಕ್ಷಿ ನಿಪಿ-3 ಭಾವಚಿತ್ರದಲ್ಲಿ ಕಾಣುವ ಚಿನ್ನಾಭರಣಗಳನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ - ಆರೋಪಿ ಪರ ಶ್ರೀ. ಎಸ್ ಎ ಎಸ್ ವಕೀಲರಿಂದಃ-

ನಾನು ಫೈನಾನ್ಸ್ ನಲ್ಲಿ ಕೆಲಸ ಮಾಡುತ್ತೇನೆ ಎಂದು ತೋರಿಸುವ ದಾಖಲಾತಿಗಳನ್ನು ಪೊಲೀಸರಿಗೆ ಕೊಟ್ಟಿಲ್ಲ ಎಂದರೆ ಸರಿ. ಪೊಲೀಸಿನವರ ಜೊತೆ ರಮೇಶ್ ಎನ್ನುವವರು ನಮ್ಮ ಫೈನಾನ್ಸ್ ಗೆ ಬಂದಿರಲಿಲ್ಲ. ನಾನು ಹೇಳಿದಂತೆ ಪೊಲೀಸರ ಜೊತೆ 1 ನೇ ಆರೋಪಿ ಬಂದಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-5 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ-5 ರಲ್ಲಿ ಬರೆದ ಚೆಕ್ಕುಬಂಧಿ ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿ. ಭಾವಚಿತ್ರದಲ್ಲಿ ಕಾಣುವ ಒಡವೆಗೂ 1 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ 1 ನೇ ಆರೋಪಿ ಅಡವಿಟ್ಟಿದ್ದ ಒಡವೆಗಳನ್ನು ಪೊಲೀಸರು ಅಮಾನತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ - ಇಲ್ಲ

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಜೆಎಂಎಫ್‌ಸಿ, ಮಡಿಕೇರಿ